ಕರ್ನಾಟಕ ಸರ್ಕಾರ

ಸಂಖ್ಯೆ ಹಿಂವಕನಿ/ಡಿಬಿಟಿ/ಸಿಆರ್-12/2013-14

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು. ದಿನಾಂಕ:18.03.2014

**ಡಿ.ಬಿ.ಟಿ ಸುತ್ತೋಲೆ-13**

**ಅತೀ ಮುಖ್ಯ ಹಾಗೂ ತುರ್ತು**

ವಿಷಯ: **2013-14ನೇ ಸಾಲಿಗೆ – ಊಟ ಮತ್ತು ವಸತಿ ಸಹಾಯ ಯೋಜನೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮತ್ತು ಶುಲ್ಕ ವಿನಾಯಿತಿ ಕಾರ್ಯಕ್ರಮಗಳಲ್ಲಿ ಮಂಜೂರಾದ ಮೊತ್ತದ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸುವ ಪೂರ್ವದಲ್ಲಿ, ವಿದ್ಯಾರ್ಥಿಗಳ ಹೆಸರು ಮತ್ತು ಬ್ಯಾಂಕ್ ಖಾತೆ ಸಂಖ್ಯೆಯನ್ನು ಧೃಢಪಡಿಸಿಕೊಳ್ಳುವ ಬಗ್ಗೆ.**

******

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2013-14ನೇ ಸಾಲಿಗೆ, ಊಟ ಮತ್ತು ವಸತಿ ಸಹಾಯ ಯೋಜನೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮತ್ತು ಶುಲ್ಕ ವಿನಾಯಿತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗಿದೆ.
2. ಅರ್ಜಿಗಳನ್ನು ನಾಲ್ಕು ಹಂತಗಳಲ್ಲಿ ಪರಿಶೀಲನೆ ಮಾಡಿದ ನಂತರ, ಆನ್‌ಲೈನ್ ಮೂಲಕ ಬಿಲ್ಲುಗಳನ್ನು ಸಿದ್ಧಪಡಿಸಿ, ಖಜಾನೆಗೆ ಸಲ್ಲಿಸಿರುತ್ತೀರಿ.
3. ಖಜಾನೆಯಿಂದ ಬ್ಯಾಂಕುವಾರು ಚೆಕ್ಕುಗಳನ್ನು ಸ್ವೀಕರಿಸಿ, ಬ್ಯಾಂಕುಗಳಿಗೆ ಸಲ್ಲಿಸುವ ಪೂರ್ವದಲ್ಲಿ, ಈ ಕೆಳಕಂಡ ಅಂಶಗಳನ್ನು ಧೃಢಪಡಿಸಿಕೊಳ್ಳಬೇಕು.

(1) ಅ) ವಿದ್ಯಾರ್ಥಿಗಳ ಆಧಾರ್ ಪೇಮೆಂಟ್ ಬ್ರಿಡ್ಜ್ ಇಲ್ಲದೇ ಇರುವುದರಿಂದ, ಅರ್ಹ ವಿದ್ಯಾರ್ಥಿಗಳ ಬ್ಯಾಂಕ್ ಅಕೌಂಟ್ ನಂಬರು ತಪ್ಪಾಗಿದ್ದಲ್ಲಿ, ಈ ಕೆಳಗಿನ ಎರಡು ಸಂದರ್ಭಗಳು ಎದುರಾಗುವ ಸಾಧ್ಯತೆ ಇದೆ.

(i) ಅರ್ಜಿ ಸಲ್ಲಿಸಿದ ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಹಣ ಪಾವತಿಯಾಗದೇ ವಾಪಸ್ಸಾಗುತ್ತದೆ.

(ii) ಸಂಬಂಧಿಸಿದ ಅರ್ಹ ವಿದ್ಯಾರ್ಥಿಯ ಬ್ಯಾಂಕ್ ಅಕೌಂಟ್‌ಗೆ ಬದಲಾಗಿ ಬೇರೆ ವ್ಯಕ್ತಿಯ ಬ್ಯಾಂಕ್ ಅಕೌಂಟ್ ನಂಬರ್‌ನ್ನು ನಮೂದಿಸಿದ್ದಲ್ಲಿ, ಮಂಜೂರಾದ ಮೊತ್ತವು ಅರ್ಜಿದಾರರ ಬ್ಯಾಂಕ್ ಖಾತೆಗೆ ಜಮಾ ಆಗದೇ ಬೇರೆ ವ್ಯಕ್ತಿಯ ಬ್ಯಾಂಕ್ ಖಾತೆಗೆ ಜಮಾ ಆಗುವ ಸಾಧ್ಯತೆ ಇದೆ. (ಎನ್.ಇ.ಎಫ್.ಟಿ ಮೂಲಕ ಹಣ ವರ್ಗಾವಣೆಯಾಗುವ ಕಾರಣ ಬ್ಯಾಂಕ್ ಖಾತೆ ನಂಬರ್‌ಗಳನ್ನು ಮಾತ್ರ ಪರಿಗಣಿಸಿ, ಮೊತ್ತವನ್ನು ವರ್ಗಾವಣೆ ಮಾಡಲಾಗುತ್ತದೆ.) ಒಮ್ಮೆ ಈ ರೀತಿಯಾಗಿ ಬೇರೊಬ್ಬ ವ್ಯಕ್ತಿಯ ಬ್ಯಾಂಕ್ ಖಾತೆಗೆ ತಪ್ಪಾಗಿ ವರ್ಗಾವಣೆಯಾದ ಮೊತ್ತವನ್ನು ಪುನಃ ಇಲಾಖೆಗೆ ಹಿಂಪಡೆಯಲು ಸಾಧ್ಯವಾಗುವುದಿಲ್ಲ.

2. **ಈ ಮೇಲಿನ ಕಾರಣಗಳಿಂದ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಮತ್ತು ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ಕಡ್ಡಾಯವಾಗಿ ಮತ್ತೊಮ್ಮೆ ಈ ಮೂರು ಕಾರ್ಯಕ್ರಮಗಳಡಿಯಲ್ಲಿ ಮಂಜೂರಾದ ವಿದ್ಯಾರ್ಥಿಗಳ ಹೆಸರು ಮತ್ತು ಬ್ಯಾಂಕ್ ಖಾತೆ ಸಂಖ್ಯೆಗಳನ್ನು ಪರಿಶೀಲನೆ ಮಾಡಿ ಧೃಢಪಡಿಸಿಕೊಂಡ ನಂತರವಷ್ಟೇ ಖಜಾನೆ ಚೆಕ್ಕನ್ನು ಸಂಬಂಧಪಟ್ಟ ಬ್ಯಾಂಕುಗಳಿಗೆ ಡಿ.ಬಿ.ಟಿ ಮೂಲಕ ಪಾವತಿಗಾಗಿ ಸಲ್ಲಿಸತಕ್ಕದ್ದು.**

3. ರಾಜ್ಯವಲಯ ಕೇಂದ್ರ ಪುರಸ್ಕೃತ ಯೋಜನೆಯಡಿ ಲಭ್ಯವಾಗುವ ಮೊತ್ತದಿಂದ, ಗ್ರೂಪ್-ಎ ಕೋರ್ಸಿನ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಕಾರ್ಯಕ್ರಮದಡಿ ಮಂಜೂರಾದ ವಿದ್ಯಾರ್ಥಿಗಳ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಹೆಸರುಗಳನ್ನು ಪ್ರತ್ಯೇಕವಾಗಿ ಪರಿಶೀಲನೆ ಮಾಡಿ ಉಪನಿರ್ದೇಶಕರು (ವಸತಿ ನಿಲಯ) ಇವರಿಗೆ ಧೃಢೀಕರಿಸಿದ ಪಟ್ಟಿಯನ್ನು **ದಿನಾಂಕ:26.03.2014 ರೊಳಗಾಗಿ ಮುದ್ದಾಂ ಸಲ್ಲಿಸುವುದು.** ಈ ವಿದ್ಯಾರ್ಥಿಗಳ ಜಿಲ್ಲಾವಾರು, ಬ್ಯಾಂಕುವಾರು, ಪಟ್ಟಿಯನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಮ್ಮ ಲಾಗಿನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

4. ಬ್ಯಾಂಕ್ ಖಾತೆ ನಂಬರು ಮತ್ತು ವಿದ್ಯಾರ್ಥಿಗಳ ಹೆಸರುಗಳ ನಿಖರತೆಯ ಬಗ್ಗೆ ಧೃಢಪಡಿಸಿಕೊಳ್ಳದೇ ಖಜಾನೆಯ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಲ್ಪಟ್ಟು, ಅರ್ಜಿದಾರರ ಬ್ಯಾಂಕ್ ಖಾತೆಯ ಬದಲಿಗೆ ಅನ್ಯ ವ್ಯಕ್ತಿಯ ಬ್ಯಾಂಕ್ ಖಾತೆಗೆ ತಪ್ಪಾಗಿ ಜಮೆಯಾಗುವಂತಹ ಮೊತ್ತಕ್ಕೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕುಮಟ್ಟದ ಅಧಿಕಾರಿಗಳೇ ನೇರ ಹೊಣೆಗಾರರಾಗಿರುತ್ತಾರೆ.

18/3/14

(ಆರ್. ಶಾಂತರಾಜ್ ಭಾ.ಆ.ಸೇ.,)
ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳಿಗೆ, ಜಿಲ್ಲಾ ಹಿಂ.ವ. ಕಲ್ಯಾಣಾಧಿಕಾರಿಗಳ ಮೂಲಕ

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ – ಜಿಲ್ಲಾ ಹಿಂ.ವ. ಕಲ್ಯಾಣಾಧಿಕಾರಿಗಳ ಮೂಲಕ ಮಾಹಿತಿಗೆ
2. ಜಂಟಿ ನಿರ್ದೇಶಕರು (ವಸತಿ ನಿಲಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಉಪ ನಿರ್ದೇಶಕರು (ವಸತಿ ನಿಲಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಡಿ.ಬಿ.ಟಿ ಶಾಖೆ ಮತ್ತು ವಿದ್ಯಾರ್ಥಿ ವೇತನ ಶಾಖೆ.

**F:\circular-13.docx**